# 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.46/2020**

| | | |
|---|---|---|
| ಹೆಸರು | : ಆನಂದ ಉರ್ಫ ಅನೀಲ ವಡ್ಡರ | ಫ್ರಾಸಾ-5 |
| ತಂದೆಯ ಹೆಸರು | : ಕಲ್ಲೊಳ್ಳೆಪ್ಪ | ಚಾಸಾ-6 |
| ವಯಸ್ಸು | : 32 ವರ್ಷ | |
| ಉದ್ಯೋಗ | : ಗೌಂಡಿ ಕೆಲಸ | |
| ವಿಳಾಸ | : ಕೆರೂರು | |

ದಿಃ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ರಾಜು ಗೊತ್ತು. ನಮ್ಮ ಊರಿನವನು ಇದ್ದಾನೆ. ಆರೋಪಿತರು ನಮ್ಮ ಊರಿನವರು. ಅವರವರ ನಡುವೆ ಏನೇನು ಗಲಾಟೆ ಆಗಿತ್ತು ಗೊತ್ತೆ ಇಲ್ಲ. ಸಹಿ ಮಾಡಲು ಹೇಳಿದಂತೆ ಮಾಡಿದ್ದೇನೆ. ಈಗ 5 ವರ್ಷಗಳ ಹಿಂದೆ ಕಿಲ್ಲಾದಲ್ಲಿ ಪೊಲೀಸರು ನೋಟೀಸ ಕೊಟ್ಟು ಕರೆಸಿದ್ದರು ಅಲ್ಲಿ ಹೋಗಿದ್ದೆ. ಜಾಗ ನಾನೇ ತೋರಿಸಿದ್ದೇನೆ. ಸದರಿ ಜಾಗದಲ್ಲಿ ಏನೇನಾಗಿತ್ತು ಏನು ಗೊತ್ತಿಲ್ಲ. ನಾನು ಏನೇನು ಹೇಳಿಲ್ಲ. ನಿಪಿ-5 ಛಾಯಾಚಿತ್ರದಲ್ಲಿ ನಾನು ಇದ್ದೇನೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## **ಪಾಟೀ ಸವಾಲುಃ** ವಿಶೇಷ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ 07.03.2020 ರಂದು ಮಧ್ಯಾಹ್ನ 3.30 ಗಂಟೆಗೆ ನಾನು, ಚಾಸಾ-1 ಹಾಗೂ ಚಾಸಾ-4, 5 ಮತ್ತು 7 ಸೇರಿ ಆರೋಪಿತರ ಮನೆಯ ಮುಂದೆ ಕಿಲ್ಲಾ

ರಸ್ತೆಯಲ್ಲಿ ಹೊರಟಾಗ ಕಾರ ರಿಪೇರಿ ವಿಚಾರವಾಗಿ ಆರೋಪಿತರು ಚಾಸಾ-1 ನ್ನು ಕುರಿತು ಕಾಡಿಬೇಡಿ ಕಾರ ರೀಪೇರಿ ಮಾಡಿಸಿಕೊಂಡಿದ್ದಿ ಎಂದು ಜಾತಿ ಎತ್ತಿ ಬೈದು ಕೈಯಿಂದ ಹೊಡೆದು ನ್ಯಾಯಾಲಯದಲ್ಲಿ ಜಮಾ ಮಾಡಿದ ಮುದ್ದೆಮಾಲು-1 ರಿಂದ ಹಲ್ಲೆ ಮಾಡುತ್ತಿದ್ದಾಗ ನಾನು, ಚಾಸಾ-5, 7 ಜಗಳ ಬಿಡಿಸಿದ್ದೇವು ಎಂದರೆ ಇಲ್ಲ. ಗಾಯಗೊಂಡ ಚಾಸಾ-1 ನ್ನು ಆಸ್ಪತ್ರೆಗೆ ದಾಖಲು ಮಾಡಿದ್ದೇವು ಎಂದರೆ ಇಲ್ಲ. ಚಾಸಾ-1 ದೂರಿದ್ದ ನಂತರ ದಿಃ 08.03.2020 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ನಾನೇ ಸ್ಥಳ ತೋರಿಸಿದ್ದೇನೆ ಎಂದರೆ ಸರಿಯಲ್ಲ ಹಾಗೂ ಅದೇ ರೀತಿ ಹಲ್ಲೆಗೆ ಬಳಸಿದ್ದ ಮುದ್ದೆಮಾಲ-1 ನ್ನು ನಾನು ತೋರಿಸಿದಂತೆ ವಶಪಡಿಸಿಕೊಂಡರು ಎಂದರೆ ಇಲ್ಲ. ಅದೇ ವಿಚಾರವಾಗಿ ದಿಃ 08.03.2020 ರಂದು ಈಗ ಓದಿ ಹೇಳಿದ ನಿಪಿ-6 ರಂತೆ ಹೇಳಿಕೆ ನೀಡಿದ್ದೆ ಎಂದರೆ ಇಲ್ಲ. ಆರೋಪಿತರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಇಲ್ಲ.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ಇಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

## 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.46/2020**

| | | |
|---|---|---|
| ಹೆಸರು | : ಸದಾನಂದ ಮದಿ | ಫ್ರಾಸಾ-4 |
| ತಂದೆಯ ಹೆಸರು | : ಗೋಪಾಲಪ್ಪ | ಚಾಸಾ-3 |
| ವಯಸ್ಸು | : 41 ವರ್ಷ | |
| ಉದ್ಯೋಗ | : ನೇಕಾರಿಕೆ | |
| ವಿಳಾಸ | : ಕೆರೂರು | |

ದಿಃ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-4 ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಛಾಯಾಚಿತ್ರದಲ್ಲಿ ನಾನು ಕಂಡು ಬರುತ್ತಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಈಗ ಸುಮಾರು 5-6 ವರ್ಷಗಳ ಹಿಂದೆ ಪೊಲೀಸ ಠಾಣೆಗೆ ದೂರು ನೀಡಲು ಬೈಕ ಕಳುವಿನ ಬಗ್ಗೆ ಹೋಗಿದ್ದೆ, ಆಗ ಪೊಲೀಸರು ಹೇಳಿದಂತೆ ಸಹಿ ಮಾಡಿದ್ದೇನೆ. ನನಗೆ ಫೋಟೋ ತೆಗೆಯಲು ಕರೆದಂತೆ ನಾನು ಪೊಲೀಸರ ಜೊತೆ ಹೋಗಿದ್ದೆ. ಕಿಲ್ಲಾದಲ್ಲಿ ಹಳೇಮಸೂತಿ ಬಳಿ ಫೋಟೋ ತೆಗೆದಿದ್ದು. ಸದರಿ ಸ್ಥಳದಲ್ಲಿ ಕಾಂತೇಶ ಬಿಜಾಪೂರ ಇದ್ದ. ಪೊಲೀಸರು ಫೋಟೋ ತೆಗೆಯಲು ಬರಬೇಕೆಂದಂತೆ ಹೋಗಿದ್ದೆ. ಸದರಿ ಸ್ಥಳದಲ್ಲಿ ಮುದ್ದೆಮಾಲನ್ನು ವಶಪಡಿಸಿಕೊಂಡಿದ್ದು, ಅದರ ಮೇಲೆ ಸಹಿ ಮಾಡಿದ್ದೇನೆ ಎಂದರೆ ಚೀಟಿಯಲ್ಲಿ ಸಹಿ ಇದೆ. ಅದನ್ನು ಮುದ್ದೆಮಾಲು-1, ಸಾಕ್ಷಿಯ ಸಹಿಯನ್ನು ಮುದ್ದೆಮಾಲು-1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-4 ನ್ನು ಬರೆದಿದ್ದಾರೆ ಎಂದರೆ ಸಾಕ್ಷಿ ನನಗೆ ಸಹಿ ಮಾಡಲು ಮಾತ್ರ ಹೇಳಿದ್ದರು ಮಾಡಿದ್ದೆ ಬರೆದಿದ್ದು ಗೊತ್ತಿಲ್ಲ. ನಿಪಿ-4 ನ್ನು ಓದಿ ಹೇಳಿ ಸಹಿ ಮಾಡಿದ್ದೇನೆ ಎಂದರೆ ಇಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ** ವಿಶೇಷ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ 08.03.2020 ರಂದು ಈಗ ಓದಿ ಹೇಳಿದಂತೆ ಬೆಳಿಗ್ಗೆ 7.45 ರಿಂದ 8.45 ರ ಅವಧಿಯಲ್ಲಿ ಚಾಸಾ-6 ತೋರಿಸಿದಂತೆ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಫೋಟೋ ತೆಗೆದು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ಓದಿ ಹೇಳಿ ಸ್ಥಳದಲ್ಲಿ ಮುದ್ದೆಮಾಲು-1 ನ್ನು ವಶಪಡಿಸಿಕೊಂಡು ಸಹಿ ಪಡೆದಿದ್ದಾರೆ ಎಂದರೆ ಇಲ್ಲ. ಹಲ್ಲೆಗೆ ಬಳಸಿದ ಕಟ್ಟಿಗೆ ಬಡಿಗೆ ಈಗ ನ್ಯಾಯಾಲಯದಲ್ಲಿ ಜಮಾ ಇದ್ದು ಅದನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಚೀಟಿಗೆ ಸಹಿ ಪಡೆದಿದ್ದು ಯಾವುದೇ ವಸ್ತುವನ್ನು ನನ್ನ ಎದುರಿಗೆ ತೆಗೆದುಕೊಂಡಿಲ್ಲ. ಆರೋಪಿತರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಇಲ್ಲ.

**ಪಾಟೀ ಸವಾಲುಃಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ಮುದ್ದೆಮಾಲಿನಂತೆ ಜಾಲಿ ಕಟ್ಟಿಗೆ ಸಹಜವಾಗಿ ಸಿಗುತ್ತದೆ ಎಂದರೆ ಸಿಗುತ್ತದೆ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.